**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 710/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ತಿಮ್ಮೇಶ.ಎನ್. | ಪ್ರಾಸಾಃ 6 |
| ತಂದೆಯ/ಗಂಡನ ಹೆಸರು | : | ನಾಗಪ್ಪ | ಚಾಸಾಃ 6 |
| ವಯಸ್ಸು | : | 35 ವರ್ಷ | |
| ಕೆಲಸ | : | ಪಿ.ಸಿ., ಮೊಳಕಾಲ್ಮೂರು ಪೊಲೀಸ್ ಠಾಣೆ, | ಸಾ ಪ್ರ ಬೋ |
| ವಾಸ | : | ಮೊಳಕಾಲ್ಮೂರು | ದಿಃ24.01.2025 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ನಾನು ಅಕ್ಟೋಬರ್ 2016 ರಿಂದ ಮಾರ್ಚ್ 2023 ರವರೆಗೆ ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಯಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 20.04.2020 ರಂದು ರಾತ್ರಿ 9 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ.5 ರವರು ಚಾಸಾ.1 ರವರೊಂದಿಗೆ ಗಸ್ತು ಕರ್ತವ್ಯದಲ್ಲಿ ಇದ್ದೆವು. ದಿನಾಂಕ 21.04.2020 ರಂದು ಬೆಳಗ್ಗೆ 5 ಗಂಟೆಯ ಸಮಯದಲ್ಲಿ ಶಿವಗಂಗ ಗ್ರಾಮದ ಬಳಿ ಗಸ್ತು ಕರ್ತವ್ಯದಲ್ಲಿದ್ದಾಗ ಹೊಸದಾಗಿ ನಿರ್ಮಾಣವಾಗುತ್ತಿರುವ ಶಾಲೆಯ ಬಳಿ ಎನ್.ಹೆಚ್.13 ರ ರಸ್ತೆಯ ಬಳಿ ಅನುಮಾನಸ್ಪದವಾಗಿ ಓಮಿನಿ ಮತ್ತು ಸರ್ಕಾರಿ ಆಂಬುಲೆನ್ಸ್ ನಿಂತಿತ್ತು. ನಾವು ಅನುಮಾನಗೊಂಡು ಕೆಳಗಡೆ ಇಳಿದು ನೋಡಲಾಗಿ ಆಂಬುಲೆನ್ಸ್‌ನಲ್ಲಿ ಇದ್ದ ಮದ್ಯದ ಬಾಕ್ಸ್‌ಗಳನ್ನು ಓಮಿನಿಗೆ ತುಂಬುತ್ತಿರುವುದು ಕಂಡುಬಂತು. ನಾವುಗಳು ಆಂಬುಲೆನ್ಸ್‌ನಲ್ಲಿ ಇದ್ದಂತ ಇಬ್ಬರನ್ನು ಮತ್ತು ಓಮಿನಿ ವಾಹನದಲ್ಲಿ ಇದ್ದಂತಹ ಇಬ್ಬರನ್ನು ಹಿಡಿದುಕೊಂಡು ಹೆಸರು ಮತ್ತು ವಿಳಾಸವನ್ನು ಕೇಳಿದಾಗ ಗಿರೀಶ್ ಬಿನ್ ಸಿದ್ದಪ್ಪ, 30 ವರ್ಷ, ದುಮ್ಮಿ ಗ್ರಾಮ, ಜೀವನ್ ತಂದೆ ಶಿವಕುಮಾರ, 27 ವರ್ಷ, ಚಾಲಕ, ರಾಮಘಟ್ಟ ಗ್ರಾಮ ಎಂದು, ಸುಬಾನ್ ಬಿನ್ ಫಸಲುಲ್ಲಾ ಖಾನ್, 30 ವರ್ಷ, ಸರ್ಕಾರಿ ಆಂಬುಲೆನ್ಸ್ ಚಾಲಕ, ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಚ್.ಡಿ.ಪುರ, ಸಂತೋಷ್ ಬಿನ್ ನಂಜಪ್ಪ, 34 ವರ್ಷ, ಲ್ಯಾಬ್ ಟೆಕ್ನೀಷನ್, ಸಾರ್ವಜನಿಕ ಆಸ್ಪತ್ರೆ, ದುಮ್ಮಿ ಗ್ರಾಮ ಎಂದು ಹೇಳಿರುತ್ತಾರೆ. ನಂತರ ಚಾಸಾ.1 ರವರು ವರದಿಯನ್ನು ತಯಾರಿಸಿ ಚಾಸಾ.5 ರವರ ಮೂಲಕ ಠಾಣೆಗೆ ಕಳುಹಿಸಿರುತ್ತಾರೆ. ನಂತರ ಅಲ್ಲಿ ಹೋಗುತ್ತಿದ್ದ ಚಾಸಾ.2 ಮತ್ತು 3 ರವರನ್ನು ಬರಮಾಡಿಕೊಂಡು, ಸದರಿರವರಿಗೆ ಮಾಹಿತಿಯನ್ನು ನೀಡಿ ಅಂಬುಲೆನ್ಸ್‌ನ ಬಳಿ ಬಂದು ಪಂಚರ ಸಮಕ್ಷಮ ಪರಿಶೀಲಿಸಲಾಗಿ, ಆಂಬುಲೆನ್ಸ್‌ನ ನೋಂದಣಿ ಸಂಖ್ಯೆ ಕೆ.ಎ.16-ಜಿ-

591 ಎಂದು ಕಂಡುಬಂದಿರುತ್ತದೆ. ಸದರಿ ವಾಹನದ ಮೇಲೆ ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಚ್.ಡಿ. ಪುರ ಎಂದು ಬರೆದಿತ್ತು. ನಂತರ ಆಂಬುಲೆನ್ಸ್‌ನ್ನು ಪರಿಶೀಲಿಸಲಾಗಿ 10 ಮಧ್ಯದ ಬಾಕ್ಸ್‌ಗಳು ಇದ್ದು, ಅವುಗಳಲ್ಲಿ 180 ಎಂ.ಎಲ್.ನ 48 ಬ್ಯಾಗ್‌ಪೈಪರ್ ವಿಸ್ಕಿಯ ಪೌಚುಗಳು ಇದ್ದವು. ನಂತರ ಓಮಿನಿಯನ್ನು ಪರಿಶೀಲಿಸಲಾಗಿ ಓಮಿನಿ ನೋಂದಣಿ ಸಂಖ್ಯೆ ಕೆ.ಎ.51-ಎಂ.ಎಲ್.-7603 ಎಂದು ಇತ್ತು. ಓಮಿನಿಯನ್ನು ಪರಿಶೀಲಿಸಲಾಗಿ ಮಧ್ಯ ತುಂಬಿರುವ 4 ಬಾಕ್ಸ್‌ಗಳಿದ್ದು, 180 ಎಂ.ಎಲ್.ನ 48 ಡಿಲಕ್ಸ್ ವಿಸ್ಕಿಯ ಪೌಚುಗಳು ಇದ್ದವು. ಈ ಎಲ್ಲಾ ಮಧ್ಯದ ಮೌಲ್ಯ ರೂ.60,614/- ಆಗಿತ್ತು. ನಂತರ ಪಂಚರ ಸಮಕ್ಷಮ ಮಧ್ಯದ ಬಾಕ್ಸುಗಳನ್ನು ವಶಕ್ಕೆ ಪಡೆದುಕೊಂಡು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಕಟ್ಟಿ ಹರಗಿನಿಂದ ಪಿ.ಆರ್.ಓ. ಎಂಬ ಮೊಹರನ್ನು ಮಾಡಿರುತ್ತೇವೆ. ನಂತರ ಅಲ್ಲಿ ಇದ್ದಂತಹ ಎರಡು ವಾಹನಗಳನ್ನು, 4 ಜನ ವ್ಯಕ್ತಿಗಳನ್ನು ಹಾಗೂ ಮಧ್ಯದ ಮಾಲನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ಸದರಿ ಮಹಜರನ್ನು ನಾನೇ ಬರೆದಿರುತ್ತೇನೆ. ಸಾಕ್ಷಿ ನಿಪಿ.2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.2(ಇ) ಎಂದು ಗುರುತಿಸಲಾಯಿತು. ನಂತರ ವಿಷಯ ತಿಳಿಯಲಾಗಿ ದುಮ್ಮಿ ಗ್ರಾಮದಲ್ಲಿ ಮಧ್ಯದ ಅಂಗಡಿಯನ್ನು ಇಟ್ಟುಕೊಂಡಿರುವ ರಾಜು ಯಾನೆ ನರಸಿಂಹ ರಾಜು ಬಿನ್ ತಿಪ್ಪೇಸ್ವಾಮಿ ರವರ ದೊಡ್ಡ ಉಳ್ಳಾರ್ತಿ ಮನೆಯಿಂದ ಮಧ್ಯದ ಬಾಕ್ಸ್‌ಗಳನ್ನು ಸರ್ಕಾರಿ ಆಂಬುಲೆನ್ಸ್‌ನಲ್ಲಿ ಅಕ್ರಮವಾಗಿ ಸಾಗಾಣಿಕೆ ಮಾಡಿರುತ್ತಾರೆಂಬುದು ತಿಳಿದುಬಂದಿರುತ್ತದೆ. ಆರೋಪಿತರು ಲಾಕ್‌ಡೌನ್ ನಿಯಮಗಳನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದು ಕಂಡುಬಂದಿರುತ್ತದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ಮತ್ತು 4 ನೇ ಆರೋಪಿತರನ್ನು ಹಾಗೂ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 4 ನೇ ಆರೋಪಿಯ ಪರ ಶ್ರೀ ಡಿ.ಎಂ.ಬಿ. ವಕೀಲರಿಂದ**

3. ಪ್ರತಿದಿನ ಗಸ್ತು ಕರ್ತವ್ಯಕ್ಕೆ ನೇಮಿಸುವ ಪೂರ್ವದಲ್ಲಿ ಠಾಣೆಯಲ್ಲಿ ಪ್ರಕ್ರಿಯೆಗಳನ್ನು ಮಾಡುತ್ತಾರೆ ಎಂದರೆ ಸರಿ. ಗಸ್ತು ಕರ್ತವ್ಯದ ಕುರಿತು ಠಾಣೆಯಲ್ಲಿ ರಿಜಿಸ್ಟರ್‌ನ್ನು ಇಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಠಾಣೆಯಲ್ಲಿ ಚಲನವಲನ ವಹಿಯನ್ನು ಇಟ್ಟಿರುತ್ತೇವೆ. ಸದರಿ ಚಲನವಲನ ವಹಿಗೆ ಠಾಣಾಧಿಕಾರಿಗಳು ಹಾಗೂ ಪಿ.ಎಸ್.ಐ. ಧರ್ಜೆಯ ಅಧಿಕಾರಿಗಳು ಸಹಿ ಮಾಡಿ ಉಲ್ಲೇಖ ಮಾಡುತ್ತಾರೆ. ನಾವು ಸದರಿ ದಾಖಲಾತಿಗೆ ಸಹಿ ಮಾಡುವುದಿಲ್ಲ. ನಮ್ಮ ಠಾಣೆಗೆ ಸಂಬಂಧಿಸಿದ ವಾಹನಗಳ ಕುರಿತು ಲಾಗ್ ಪುಸ್ತಕಗಳನ್ನು ಇಟ್ಟಿರುತ್ತೇನೆ. ಸದರಿ ಲಾಗ್ ಪುಸ್ತಕದಲ್ಲಿ ಠಾಣಾ ಜೀಪು ಎಷ್ಟು ದೂರ ಕ್ರಮಿಸಿತ್ತು ಹಾಗೂ ಯಾವ ಮಾರ್ಗದಲ್ಲಿ ಕ್ರಮಿಸಿತ್ತು ಎಂಬ ಬಗ್ಗೆ ಠಾಣಾ ಜೀಪಿನ ಚಾಲಕ

ಉಲ್ಲೇಖ ಮಾಡುತ್ತಾರೆ. ಸದರಿ ದಿನ ನಮ್ಮ ಠಾಣಾ ಜೀಪಿಗೆ ನಾನೇ ಚಾಲಕನಾಗಿದ್ದೆನು. ನನ್ನ ಬಳಿ ವಾಹನ ಚಾಲನೆ ಮಾಡಲು ಚಾಲನಾ ಪರವಾನಗಿ ಇದೆ. ನಾನು ಸದರಿ ದಿನದಂದು ಚಾಲನೆ ಮಾಡಿದ್ದ ಬಗ್ಗೆ ಹಾಗೂ ಎಷ್ಟು ದೂರ ಕ್ರಮಿಸಿದ್ದೆ ಎಂಬ ಬಗ್ಗೆ ಲಾಗ್ ಪುಸ್ತಕದಲ್ಲಿ ಉಲ್ಲೇಖ ಮಾಡಿಲ್ಲ. ನಾವು ದಿನಾಂಖ 21.04.2020 ರಂದು ಬೆಳಗಿನ ಜಾವ 5 ಗಂಟೆಗೆ ಶಿವಗಂಗದ ವಿವಾದಿತ ಸ್ಥಳಕ್ಕೆ ಪೂರ್ವದಲ್ಲಿ ಯಾವ ಮಾರ್ಗಗಳಲ್ಲಿ ಗಸ್ತು ಕರ್ತವ್ಯ ಮಾಡಿದ್ದ ಬಗ್ಗೆ ನಿಖರವಾಗಿ ಹೇಳಲು ಆಗುವುದಿಲ್ಲ.

4. ದೊಡ್ಡ ಉಳ್ಳಾರ್ತಿ ಗ್ರಾಮದಿಂದ ಶಿವಗಂಗ ಗ್ರಾಮಕ್ಕೆ ಬರಲು ಚಳ್ಳಕೆರೆ ಟೌನಿನ ಮೂಲಕ ಚಿತ್ರದುರ್ಗ ಟೌನ್‌ನ್ನು ಹಾದುಕೊಂಡು ಬರಬೇಕು ಎಂದರೆ ಸರಿ. ಸದರಿ ಸಮಯದಲ್ಲಿ ಕೋವಿಡ್-19 ಇದ್ದ ಕಾರಣದಿಂದ ನಗರ ಪ್ರದೇಶಗಳಲ್ಲಿ ಹಾಗೂ ಗಡಿಗಳಲ್ಲಿ ಚೆಕ್‌ಪೋಸ್ಟ್‌ನ್ನು ನಿರ್ಮಿಸಿದ್ದರು ಎಂದರೆ ಸರಿ. ಸದರಿ ಚೆಕ್ ಪೋಸ್ಟುಗಳಲ್ಲಿ ಬರುವಂತಹ ಎಲ್ಲಾ ವಾಹನಗಳನ್ನು ಪರಿಶೀಲಿಸುತ್ತಾರೆ ಎಂದರೆ ಸಾಕ್ಷಿ ಆಂಬುಲೆನ್ಸ್‌ನ್ನು ಪರಿಶೀಲಿಸುವುದಿಲ್ಲ ಎಂದು ಹೇಳುತ್ತಾರೆ. ಆಂಬುಲೆನ್ಸ್‌ಗಳಲ್ಲಿ ಸಿಗ್ನಲ್ ಅಳವಡಿಸಿಕೊಂಡು ಹೋಗುವಾಗ ಮಾತ್ರ ಪರಿಶೀಲಿಸುವುದಿಲ್ಲ ಎಂದರೆ ಸಾಕ್ಷಿ ಸಾಮಾನ್ಯವಾಗಿ ಆಂಬುಲೆನ್ಸ್‌ಗಳಲ್ಲಿ ರೋಗಿಗಳನ್ನು ಕರೆದುಕೊಂಡು ಹೋಗುವ ಕಾರಣ ಪರಿಶೀಲನೆ ಮಾಡುವುದಿಲ್ಲ ಎಂದು ಹೇಳುತ್ತಾರೆ. ಬೆಂಗಳೂರಿನ ಪ್ರದೇಶದಲ್ಲಿ ಕೋವಿಡ್ 19 ಸಮಯದಲ್ಲಿ ಯಾವುದೇ ರೋಗಿಗಳನ್ನು ಕರೆದುಕೊಂಡು ಹೋಗದೆ ಆಂಬುಲೆನ್ಸ್‌ನ್ನು ಖಾಲಿಯಾಗಿ ಸಿಗ್ನಲ್ ಅಳವಡಿಸಿಕೊಂಡು ಓಡಾಡಿಸಿದ್ದರ ಬಗ್ಗೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಚೆಕ್‌ಪೋಸ್ಟ್‌ಗಳಲ್ಲಿ ಹಾದುಹೋಗುವಂತಹ ವಾಹನಗಳ ಸಂಖ್ಯೆಯನ್ನು ಬರೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ಆಂಬುಲೆನ್ಸ್‌ಗಳ ಸಂಖ್ಯೆಯನ್ನು ಬರೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ.

5. ಚಿತ್ರಹಳ್ಳಿ ಪೊಲೀಸ್ ಠಾಣೆಯಲ್ಲಿ ಸಿ.ಸಿ. ಕ್ಯಾಮೆರಾ ಅಳವಡಿಸಿದ್ದಾರೆ ಎಂದರೆ ಸರಿ. ಸದರಿ ಸಿ.ಸಿ. ಕ್ಯಾಮೆರಾದಲ್ಲಿ ಚಿತ್ರದುರ್ಗ - ಹೊಳಲ್ಕೆರೆ ಮಾರ್ಗವಾಗಿ ಬರುವಂತಹ ವಾಹನಗಳು ರಸ್ತೆಯಲ್ಲಿ ಹೋಗುವಾಗ ಕಂಡುಬರುತ್ತದೆ ಎಂದರೆ ಸರಿಯಲ್ಲ. ಕೋವಿಡ್ 19 ಸಮಯದಲ್ಲಿ ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣಾ ವ್ಯಾಪ್ತಿಯ ಚಿತ್ರದುರ್ಗ ರಸ್ತೆಯ ಮಾರ್ಗದಲ್ಲಿ ಚೆಕ್‌ಪೋಸ್ಟ್‌ನ್ನು ಅಳವಡಿಸಿದ್ದರು ಎಂದರೆ ಸರಿಯಲ್ಲ. ನಿಪಿ.6 ರ ಛಾಯಾಚಿತ್ರದಲ್ಲಿ ಓಮಿನಿ ವಾಹನದಲ್ಲಿ ಮದ್ಯದ ಪೌಚುಗಳು ಇರುವ ಕುರುಹುಗಳು ಇಲ್ಲ ಎಂದರೆ ಸರಿ. ನಾವು ಪಂಚರ ಸಮಕ್ಷಮ ಆಂಬುಲೆನ್ಸ್‌ನಲ್ಲಿ ಇದ್ದಂತಹ 180 ಎಂ.ಎಲ್.ನ 48 ವಿಸ್ಕಿಯ ಪೌಚುಗಳನ್ನು ಹಾಗೂ ಓಮಿನಿ ವಾಹನದಲ್ಲಿ 180 ಎಂ.ಎಲ್.ನ 48 ವಿಸ್ಕಿಯ ಪೌಚುಗಳನ್ನು ಪರಿಶೀಲಿಸಿದ ಬಗ್ಗೆ ಮತ್ತು ಅಮಾನತ್ತುಪಡಿಸಿಕೊಂಡ ಬಗ್ಗೆ ನಿಪಿ.5

ಮತ್ತು 6 ರ ಛಾಯಾಚಿತ್ರಗಳಲ್ಲಿ ಕುರುಹುಗಳು ಇಲ್ಲ ಎಂದರೆ ಸರಿ. ನಿಪಿ.4 ರ ಛಾಯಾಚಿತ್ರದಂತೆ ಓಮಿನಿ ವಾಹನದಲ್ಲಿ ಮದ್ಯದ ಪೌಚುಗಳು ಇಲ್ಲ ಎಂದರೆ ಸರಿಯಲ್ಲ.

6. ನಿಪಿ.7 ಮತ್ತು 8 ರ ಛಾಯಾಚಿತ್ರಗಳು ದೊಡ್ಡ ಉಳ್ಳಾರ್ತಿ ಗ್ರಾಮದ 5 ನೇ ಆರೋಪಿತರ ಜಾಗದಿಂದ ಮದ್ಯದ ಪೌಚುಗಳನ್ನು ಸಾಗಾಣಿಕೆ ಮಾಡಿದ ಕುರಿತು ತೋರಿಸುವ ಸ್ಥಳಗಳ ಬಗ್ಗೆ ಇದೆ. ನಿಪಿ.7 ಮತ್ತು 8 ರ ಛಾಯಾಚಿತ್ರಗಳಲ್ಲಿ ಆಂಬುಲೆನ್ಸ್‌ನ ಚಕ್ರಗಳ ಕುರುಹುಗಳು ಇಲ್ಲ ಎಂದರೆ ಸಾಕ್ಷಿ ಅಂತಹ ರಸ್ತೆಯಲ್ಲಿ ಚಕ್ರಗಳ ಕುರುಹುಗಳು ಕಾಣುವುದಿಲ್ಲ ಎಂದು ಹೇಳುತ್ತಾರೆ. ನಿಪಿ.8 ರ ಛಾಯಾಚಿತ್ರದಲ್ಲಿ ಮನೆಯ ಅಸ್ತಿತ್ವ ಇದೆ. ನಿಪಿ.8 ರ ಛಾಯಾಚಿತ್ರದಲ್ಲಿರುವ ಮನೆಯ ಒಳಭಾಗಕ್ಕೆ 5 ನೇ ಆರೋಪಿತರನ್ನು ಕರೆದುಕೊಂಡು ಹೋಗಿ ಮನೆಯ ಯಾವ ಭಾಗದಲ್ಲಿ ಮದ್ಯದ ಮಾಲನ್ನು ಇಡಲಾಗಿತ್ತು ಎಂದು ವಿಚಾರಣೆ ಮಾಡಿಲ್ಲ. ನಾನು ನಿಪಿ.5 ರಿಂದ 8 ರ ಸ್ಥಳಕ್ಕೆ ಹೋಗಿದ್ದರ ಬಗ್ಗೆ ಛಾಯಾಚಿತ್ರಗಳಲ್ಲಿ ನನ್ನ ಕುರುಹು ಇಲ್ಲ.

7. ಮಹಜರನ್ನು ಮಾತ್ರ ನಾನು ಬರೆದಿದ್ದು, ಮಹಜರಿನಲ್ಲಿ ಇರುವಂತಹ ಕಚ್ಚಾ ನಕ್ಷೆಯನ್ನು ತನಿಖಾಧಿಕಾರಿಯ ಸಹಾಯಕರು ತಯಾರಿಸಿರುತ್ತಾರೆ. ಸದರಿ ಕಚ್ಚಾ ನಕ್ಷೆಯನ್ನು ಯಾರು ತಯಾರಿಸಿದರು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಮಹಜರನ್ನು ಯಾರು ಬರೆಯುತ್ತಾರೋ ಅವರೆ ಕಚ್ಚಾ ನಕ್ಷೆಯನ್ನು ಕೂಡ ತಯಾರಿಸುತ್ತಾರೆ ಎಂದರೆ ಸರಿಯಲ್ಲ. ನಾನು ಮಹಜರಿಗೆ ಸಹಿ ಮಾಡುವಾಗ ಸದರಿ ಮಹಜರಿನಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಲಾಗಿತ್ತು, ಆದರೆ ಕಚ್ಚಾ ನಕ್ಷೆಯನ್ನು ಯಾರು ತಯಾರಿಸಿದರು ಎಂದು ನನಗೆ ಗೊತ್ತಿಲ್ಲ. ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿ ಜರುಗಿಸಿದಂತಹ ಮಹಜರಿನ ಪ್ರಕ್ರಿಯೆಯ ಕುರಿತು ನನಗೆ ಮಾಹಿತಿ ಇಲ್ಲ.

8. ಮದ್ಯದ ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲು ಇಟ್ಟಂತಹ ಪ್ಲಾಸ್ಟಿಕ್ ಚೀಲಗಳಿಗೆ ಪಂಚರ ಸಹಿಗಳನ್ನು ಪಡೆದುಕೊಂಡಿಲ್ಲ. ದೊಡ್ಡ ಉಳ್ಳಾರ್ತಿಯಲ್ಲಿ ತೆಗೆದಂತಹ ಛಾಯಾಚಿತ್ರಗಳನ್ನು ನಾನು ತೆಗೆದಿರುತ್ತೇನೆ, ಶಿವಗಂಗದ ಬಳಿ ತೆಗೆದ ಛಾಯಾಚಿತ್ರಗಳನ್ನು ನಮ್ಮ ಸಿಬ್ಬಂಧಿಗಳು ತೆಗೆದಿದ್ದು, ಅವರ ಹೆಸರು ಗೊತ್ತಿಲ್ಲ. ಸ್ಥಳದಲ್ಲಿ ಪಂಚರ ಮಾದರಿ ಹೆಬ್ಬೆಟ್ಟಿನ ಗುರುತುಗಳನ್ನು ಪಡೆದುಕೊಂಡಿಲ್ಲ. ಸಹಿಗಳನ್ನು ಪಡೆದುಕೊಂಡಿರುತ್ತೇವೆ. ನಾನು ಮತ್ತು ಚಾಸಾ.5 ರವರು ಚಾಸಾ.1 ರವರೊಂದಿಗೆ ದಿನಾಂಕ 21.04.2020 ರ ಬೆಳಗಿನ ಜಾವ 5 ಗಂಟೆಗೆ ಕೃತ್ಯ ಸ್ಥಳಕ್ಕೆ ಹೋಗಿಲ್ಲ, ಮತ್ತು ಆಂಬುಲೆನ್ಸ್‌ನಲ್ಲಿ ಯಾವುದೇ ಮದ್ಯದ ಪೌಚುಗಳು ಇರಲಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ನಾವು ಸದರಿ ಮದ್ಯದ ಪೌಚುಗಳನ್ನು ಪರಿಶೀಲನೆ ಮಾಡಿಲ್ಲ ಮತ್ತು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ

ಸರಿಯಲ್ಲ. ನಿಪಿ.5 ರ ಛಾಯಾಚಿತ್ರಗಳಲ್ಲಿ ಆಂಬುಲೆನ್ಸ್‌ನಲ್ಲಿ ಇರುವಂತಹ ಬಾಕ್ಸ್‌ಗಳಲ್ಲಿ ಮೆಡಿಷನ್‌ಗಳು ಇವೆ ಎಂದರೆ ಸರಿಯಲ್ಲ. ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಂತಹ 3 ಮತ್ತು 4 ನೇ ಆರೋಪಿತರನ್ನು ಕರೆದು ಈ ಪ್ರಕರಣದಲ್ಲಿ ಸಿಲುಕಿಸುವ ಸಲುವಾಗಿ ಅವರನ್ನು ನಿಲ್ಲಿಸಿ ಛಾಯಾಚಿತ್ರಗಳನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ವಿವಾದಿತ ದಿನದಂದು ಯಾವುದೇ ಘಟನೆ ನಡೆಯದಿದ್ದಾಗ್ಯೂ, ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ದಿನದಂದು ಠಾಣಾ ಜೀಪಿನಲ್ಲಿ ಚಾಲಕನಾಗಿ ಕರ್ತವ್ಯನಿರ್ವಹಿಸುತ್ತಿದ್ದೆನು ಎಂದು ಮಹಜರಿನಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ 5 ನೇ ಆರೋಪಿಯ ಪರ ಶ್ರೀ ಯು.ಎಸ್. ವಕೀಲರಿಂದ**

9. ನಿಪಿ.7 ಮತ್ತು 8 ರ ಛಾಯಾಚಿತ್ರಗಳನ್ನು ಎಷ್ಟು ಗಂಟೆ ಸಮಯದಲ್ಲಿ ತೆಗೆಯಲಾಗಿದೆ ಎಂದು ನೆನಪಿಲ್ಲ. ನಿಪಿ.7 ಮತ್ತು 8 ರಲ್ಲಿ ಕಾಣಿಸುವಂತಹ ಜಾಗ ಖಾಲಿ ಜಾಗ ಎಂದರೆ ಸಾಕ್ಷಿ ಮನೆ ಇದೆ ಎಂದು ಹೇಳುತ್ತಾರೆ. ಮುಂದುವರೆದು 4 ನೇ ಆರೋಪಿತರ ಪರ ವಕೀಲರ ಪಾಟೀ ಸವಾಲನ್ನೆ ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿಯ ಪರ ವಕೀಲರಿಂದ**

4 ನೇ ಆರೋಪಿತರ ಪರ ವಕೀಲರ ಪಾಟೀ ಸವಾಲನ್ನೆ ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ